# ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನವರಾತ್ರಿ ಉತ್ಸವದ ಸಂಭ್ರಮ

(...1ನೇ ಪುಟದಿಂದ)







ವ್ಯವಸ್ಥಿತವಾಗಿ ಮಾಡಿದ್ದರು.

ತಾ.09-10-2008ರಂದು ವಿಜಯ ದಶಮಿ. ಶ್ರೀ ಶಾರದಾ ಮಂಟಪದಲ್ಲಿ ಹಬ್ಬದ ಸಂಭ್ರಮ. ಅಂದು ಬೆಳಿಗ್ಗೆ 7-00ಗಂಟೆಗೆ ಸರಿಯಾಗಿ ವೇದಮೂರ್ತಿ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡುವುದರ ಮೂಲಕ ಚಂಡಿಕಾ ಯಾಗಕ್ಕೆ ಶುಭಾರಂಭ ಮಾಡಲಾಯಿತು. ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿರುವ ಸಿ. ಎಸ್. ರಾಯರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಸುನಂದ ಸಿ.ಎಸ್. ರಾವ್ ದಂಪತಿಗಳು ನಮ್ಮ ಸಮಾಜದ ಪರವಾಗಿ ಚಂಡಿಕಾ ಯಾಗದ ಕರ್ತೃಗಳಾಗಿ ಕಾರ್ಯನಿರ್ವಹಿಸಿದರು. ಯಾಗದ ಧಾರ್ಮಿಕ ಕ್ರಿಯೆಗಳು ನಡೆಯುತ್ತಿದ್ದಂತೆ ಮಹಿಳಾ ವೇದಿಕೆಯ ಸದಸ್ಯರು ಲಲಿತಾ ಸಹಸ್ರನಾಮ ಪಠಣ ನಡೆಸಿದರು. ಪೂರ್ವಾಹ್ನ 7-00 ಗಂಟೆಗೆ ಆರಂಭವಾದ ಚಂಡಿಕಾಯಾಗ 11-30ರ ಹೊತ್ತಿಗೆ ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡಿತು.

**ಸಾಂಸ್ಕೃತಿಕ ಸ್ಪರ್ಧೆಗಳು :**

ವಿಜಯದಶಮಿಯಂದು ಈ ಹಿಂದೆ ನಡೆದುಕೊಂಡು ಬಂದಂತೆ ಈ ವರ್ಷವೂ ನಮ್ಮ ಸಮಾಜದ ಎಲ್ಲಾ ವರ್ಗದ ಜನರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ವಿದ್ಯಾರ್ಥಿಗಳಿಗೆ ರಂಗೋಲಿ, ಭಕ್ತಿಗೀತೆ, ಚಿತ್ರ ರಚನೆ, ಕಂಠಪಾಠ ಸ್ಪರ್ಧೆ ಮತ್ತು ಛದ್ಮವೇಷ ಸ್ಪರ್ಧೆಗಳನ್ನು, ಮಹಿಳೆಯರಿಗೆ ಹೂಕಟ್ಟುವ ಸ್ಪರ್ಧೆಯನ್ನು, ಪುರುಷರಿಗೆ ಚೂರ್ಣಿಕೆ ಹೇಳುವ ಸ್ಪರ್ಧೆಯನ್ನು ನಡೆಸಲಾಯಿತು. ದಿನಮಣಿ ಶಾಸ್ತ್ರಿ, ಶ್ರೀಮತಿ ವಾಣಿ ರವೀಂದ್ರ ಭಂಡಿ, ಡಾ| ವೈ. ರವೀಂದ್ರನಾಥ ರಾವ್, ಅರವಿಂದ ಕುಮಾರ್, ಶ್ರೀಮತಿ ರೂಪಾ ವಸಂತ ರಾವ್, ಜಗದೀಶ ರಾವ್, ವಸಂತ ರಾವ್ ಕೇದಿಗೆ, ಕೃಷ್ಣಮೂರ್ತಿ ರಾವ್ ಬ್ರಹ್ಮಾವರ, ಕೆ. ಎಸ್. ಭಾಸ್ಕರ ರಾವ್, ಕೆ. ವೇಣುಗೋಪಾಲ ರಾವ್, ಶ್ರೀಮತಿ ಉಷಾ ಮೋಹನ್ ರಾವ್, ಶ್ರೀಮತಿ ವಿದ್ಯಾಧರಿ ಸುದರ್ಶನ ರಾವ್, ಸದಾಶಿವ ಶಾಸ್ತ್ರಿ ವೈ. ವಿಠಲರಾವ್ ಮತ್ತು ಪ್ರಭಾಕರ ಭಂಡಿ ಯವರು ಸಾಂಸ್ಕೃತಿಕ ಸ್ಪರ್ಧೆಗಳ ಸಂಯೋಜಕರಾಗಿ ಮತ್ತು ತೀರ್ಪುಗಾರರಾಗಿ ಸಹಕರಿಸಿದರು.

ಇದೇ ಸಂದರ್ಭದಲ್ಲಿ ಮಹಿಳಾ ವೇದಿಕೆಯವರು ಶ್ರೀಶಾರದಾ ಮಾತೆಗೆ ಅಲಂಕರಿಸಿದ ಸೀರೆಗಳನ್ನು ಮಾರಾಟ ಮಾಡಿದರು.

**ನೂತನ ಆಡಳಿತ ಕಛೇರಿಯ ಉದ್ಘಾಟನೆ**

ಆಂತರಿಕ ಪರಿವರ್ತನೆಗೊಂಡ ಮಧ್ವಲಕ್ಷ್ಮೀ ಹಾಲ್‌ನಲ್ಲಿ ನೂತನವಾಗಿ ರಚಿಸಿದ ಆಡಳಿತ ಕಛೇರಿಯನ್ನು ವೇದಮೂರ್ತಿ ವಾಸುದೇವ ಉಪಾಧ್ಯಾಯರು ದೀಪ ಹಚ್ಚಿ ಮಂತ್ರಘೋಷ ಮಾಡುವುದರ ಮೂಲಕ ಉದ್ಘಾಟಿಸಿ ಸಂಘಕ್ಕೆ ಉತ್ತರೋತ್ತರ ಶ್ರೇಯಸ್ಸನ್ನು ಕೋರಿದರು. ಆಡಳಿತ ಮಂಡಳಿಯ ಸದಸ್ಯರು ಮತ್ತು ಇತರ ಸಮಾಜ ಬಾಂಧವರು ಹಾಜರಿದ್ದರು.

**ಉಚಿತ ವೈದ್ಯಕೀಯ ತಪಾಸಣಾ ಶಿಬಿರ**

ಕಳೆದ ವರ್ಷದಂತೆಯೇ ಈ ವರ್ಷವೂ ಡಾ| ಜಿ.ಎಸ್. ಚಂದ್ರಶೇಖರ್‌ರವರ ಆದರ್ಶ್ ಆಸ್ಪತ್ರೆ ಮತ್ತು ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್ ವತಿಯಿಂದ ಉಚಿತ ರಕ್ತದೊತ್ತಡ ಡಯಾಬಿಟಿಸ್, ಇಸಿಜಿ ಮತ್ತು ಕೊಲೆಸ್ಟ್ರಾಲ್‌ಗಳ ತಪಾಸಣಾ ಶಿಬಿರ ನಡೆಯಿತು. ಶ್ರೀ .ಬಿ. ವಾಸುದೇವ ರಾಯರು, ಸಿ. ದೇವರಾವ್ ಮತ್ತು ಇತರ ಹಿರಿಯ ಸಮಾಜ ಬಾಂಧವರು ಒಂದಾಗಿ ದೀಪ ಬೆಳಗಿಸಿ ಶಿಬಿರವನ್ನು ಉದ್ಘಾಟಿಸಿದರು. ಡಾ| ಸುದರ್ಶನ ರಾವ್‌ರವರು ಡಾ| ಸಾನ್ಯೊ ಡಿ'ಸೋಜ ರವರಿಗೆ ಸ್ಮರಣಿಕೆ ನೀಡಿ ಎಲ್ಲರಿಗೂ ಕೃತಜ್ಞತೆ ಅರ್ಪಿಸಿದರು. ಡಾ| ವೈ. ಸುದರ್ಶನ ರಾವ್, ವೈ. ಪ್ರಕಾಶ ರಾವ್ ಮತ್ತು ವೈ. ಪ್ರದೀಪ ಕುಮಾರ್‌ರವರು ವ್ಯವಸ್ಥೆಯಲ್ಲಿ ಸಹಕರಿಸಿದರು.

**ವಧೂ-ವರರ ಮಾಹಿತಿ**

ವಧೂ-ವರರ ಆಯ್ಕೆಯ ಕಾರ್ಯವನ್ನು ಸುಲಭಗೊಳಿಸಲು ವಧೂ-ವರರ ವೇದಿಕೆಯ ಎಲ್ಲಾ ಸದಸ್ಯರು ವಧೂವರರ ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾರೆ. ಇಷ್ಟರವರೆಗೆ ಸಂಗ್ರಹವಾದ ಮಾಹಿತಿಗಳ ವಿನಿಮಯ ಮತ್ತು ಹೊಸ ಮಾಹಿತಿಗಳ ಸಂಗ್ರಹ ಕಾರ್ಯವನ್ನು ಶ್ರೀ ಕೆ. ಸುರೇಶ ರಾವ್, ಶ್ರೀ ಕೆ. ವಸಂತ ರಾವ್ ಮತ್ತು ಇತರ ಸದಸ್ಯರ ಸಹಕಾರದಿಂದ ಮಾಡಲಾಯಿತು.

**ಸಾಂಸ್ಕೃತಿಕ ಕಾರ್ಯಕ್ರಮಗಳು :**

ವಿಜಯದಶಮಿಯ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಪ್ರಾರ್ಥನೆ, ಅಳುವುದೇತಕೋ ರಂಗ, ಕೋಟಿಕೋಟಿ ನಮನ ನಿನಗೆ, ಬೇಡ ಕೃಷ್ಣ ರಂಗಿನಾಟ, ತುಳು ಹಾಡಿಗೆ ನೃತ್ಯ, ನಿಂತಲ್ಲೇ ನೀರು, ಸೊಬಗಿನ ಕೋಲಾಟ, ಕವಿರತ್ನ ಕಾಳಿದಾಸ ಸಿನೇಮಾ ಧ್ವನಿಸುರುಳಿ ಹಾಡಿಗೆ ಕುರಿಗಳು ಎಂಬ ನೃತ್ಯ, ದೇವರನಾಮ-ಸ್ವಾಗತಂ ಕೃಷ್ಣ, ಅಂಕುಡೊಂಕು ಸುಂಕವಿಲ್ಲ - ಹೀಗೆ ವಿವಿಧ ನೃತ್ಯ ಕಾರ್ಯಕ್ರಮಗಳು ನಡೆದವು. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಪುಟಾಣಿಗಳಾದ ಬೇಬಿ ಪ್ರೇರಣ, ಪ್ರಣಮ್ಯ, ಪ್ರಮೋದಿನಿ, ಶಮಾತ್ಮಿಕಾ, ಅರ್ಪಿತಾ, ದೀಕ್ಷಾ, ಮಾನಸ, ಪ್ರಗತಿ ಭಂಡಿ, ದಿಶಾ, ಅನುಶ್ರೀ, ಅನುಜ್ ಇವರೆಲ್ಲರ ಹೆತ್ತವರ ಆಸಕ್ತಿ ಮತ್ತು ವಾಣಿ ರವೀಂದ್ರ ಭಂಡಿ, ಜಯಶ್ರೀಯವರ ಸಹಕಾರ ಮತ್ತು ಪ್ರೋತ್ಸಾಹಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾದವು. ಉಷಾ ಮೋಹನ್‌ರಾವ್ ಮತ್ತು ಸುನೀತ ಕಾರ್ಯಕ್ರಮ ಸಂಯೋಜಿಸಿ ನಿರೂಪಿಸಿದರು.

ಭೋಜನಾನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಸಿ. ಎಸ್. ರಾಯರು ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿದರು. ಮಾತ್ರವಲ್ಲದೆ ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 'ಉದಯಚಂದ್ರ ಪ್ರತಿಭಾ ಪುರಸ್ಕಾರ' ನೀಡಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಸ್ಪರ್ಧಾಳುಗಳಿಗೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನೀಡಲ್ಪಟ್ಟ ಪ್ರೋತ್ಸಾಹಕ ಬಹುಮಾನವನ್ನು ಶ್ರೀಮತಿ ವಿದ್ಯಾಧರಿ ಸುದರ್ಶನ ರಾವ್‌ರವರು ವಿತರಿಸಿದರು. ಸಭಾ ಕಾರ್ಯಕ್ರಮದ ಅಂತ್ಯದಲ್ಲಿ ಸಂಘದ ಕಾರ್ಯದರ್ಶಿಗಳಾದ ವೈ. ಭುವನೇಂದ್ರ ರಾಯರು ಎಲ್ಲರಿಗೂ ಕೃತಜ್ಞತೆ ಸಮರ್ಪಿಸಿದರು.

**ಉದಯಚಂದ್ರ ಪ್ರತಿಭಾ ಪುರಸ್ಕೃತರು :**

1) **ಸಂಪತ್ ಕುಮಾರ್, ಕುಂದಾಪುರ** (ಎಂ.ಟೆಕ್. ಸ್ವರ್ಣ ಪದಕ ವಿಜೇತರು.)

2) **ವೀಣಾಶ್ರೀ ಕೆ. ಪುತ್ತೂರು** (2ನೇ ಪಿ.ಯು.ಸಿ. ವಾಣಿಜ್ಯ ವಿಭಾಗ)

3) **ಅನೀಶ್ ಎಂ.ಯು., ಮಂಗಳೂರು** (2ನೇ ಪಿ.ಯು.ಸಿ. ವಿಜ್ಞಾನ ವಿಭಾಗ)

4) **ಪೂಜಾಶರ್ಮ, ಪರ್ಕಳ** (ಎಸ್.ಎಸ್.ಎಲ್.ಸಿ.)

**ವಿವಿಧ ಸ್ಪರ್ಧೆಗಳ ವಿಜೇತರು :**

ಕಂಠಪಾಠ ಸ್ಪರ್ಧೆ (7ನೇ ತರಗತಿ ವರೆಗೆ) 1) ಶ್ರವಣ ಕುಮಾರ್ 2) ಶಮಾತ್ಮಿಕಾ 3) ಪಲ್ಲವಿ ರಾವ್

ಕಂಠಪಾಠ ಸ್ಪರ್ಧೆ (8ನೇ ತರಗತಿ ಮೇಲ್ಪಟ್ಟು) 1) ಅಪರ್ಣಾ ರಾವ್ 2) ವೈ. ದೀಕ್ಷಾ ರಾವ್ 3) ಕೆ. ರಕ್ಷಿತಾ

ಭಕ್ತಿಗೀತೆ ಸ್ಪರ್ಧೆಗಳು (4ನೇ ತರಗತಿ ವರೆಗೆ) 1) ವೈ ಮಾನಸ ರಾವ್ 2) ಮಹಿಮಾ 3) ಲಹರಿ

ಭಕ್ತಿಗೀತೆ ಸ್ಪರ್ಧೆಗಳು : (5 ರಿಂದ 7 ತರಗತಿ ವರೆಗೆ) 1) ಪಲ್ಲವಿ ರಾವ್ 2) ಅರುಣ 3) ಗೌತಮಿ

ಭಕ್ತಿಗೀತೆ ಸ್ಪರ್ಧೆಗಳು : (8ನೇ ತರಗತಿ ಮೇಲ್ಪಟ್ಟು) 1) ಕೆ. ರಕ್ಷಿತಾ 2) ದೀಕ್ಷಾ ರಾವ್ ವೈ. 3) ಅಶ್ವಿನಿ ಶಾಸ್ತ್ರಿ

ಹೂಮಾಲೆ ಕಟ್ಟುವುದು : 1)ಗಾಯತ್ರಿ ಶಾಸ್ತ್ರಿ 2) ವಾಣಿ ರವೀಂದ್ರ ಭಂಡಿ 3) ಡಾ| ಶೋಭಾ ರಾವ್

ರಂಗವಲ್ಲಿ (4ನೇ ತರಗತಿ ವರೆಗೆ) : 1) ಮಹಿಮಾ 2) ಶಮಾತ್ಮಿಕಾ 3) ಸುದೇಷ್ಣಾ ರಾವ್

ರಂಗವಲ್ಲಿ (5 ರಿಂದ 7 ತರಗತಿ ವರೆಗೆ) : 1) ಪಲ್ಲವಿ ರಾವ್ 2) ಗೌತಮಿ ಕೆ. 3) ಆಕಾಶ್ ರಾವ್

ರಂಗವಲ್ಲಿ (8ನೇ ತರಗತಿ ನಂತರ) : 1) ಹರಿಣಾಕ್ಷಿ ರಾವ್ 2) ಕಾರ್ತಿಕ್ 3) ದೀಕ್ಷಾ ರಾವ್ ವೈ.

ಚೂರ್ಣಿಕ ಹೇಳುವುದು : 1) ಗೌತಮಿ 2) ಅಶ್ವಿನಿ ಶಾಸ್ತ್ರಿ 3) ಕೆ. ರಕ್ಷಿತ

ಚಿತ್ರಕಲೆ (4ನೇ ತರಗತಿ ವರೆಗೆ): 1) ಸಹನಾ ದಿನಮಣಿ ಶಾಸ್ತ್ರಿ 2) ವೈ. ಮಾನಸ ರಾವ್ 3) ವೈಶಾಖ ಸಿ. ರಾವ್

ಚಿತ್ರಕಲೆ (5 ರಿಂದ 7ನೇ ತರಗತಿ ವರೆಗೆ) : 1) ಗೌತಮಿ ಕೆ. 2) ಸೌರವ್ ಕೆ. ಶಾಸ್ತ್ರಿ 3) ಐಶ್ವರ್ಯ

ಚಿತ್ರಕಲೆ (8ನೇ ತರಗತಿ ನಂತರ) : 1) ಅಶ್ವಿನಿ ಶಾಸ್ತ್ರಿ 2) ವರುಣ್ ಕೇದಿಗೆ 3) ಪೂಜಾ ರಾವ್

ಛದ್ಮವೇಷ ಸ್ಪರ್ಧೆ (4ನೇ ತರಗತಿ ವರೆಗೆ) : 1) ಅನನ್ಯ ಶಾಸ್ತ್ರಿ 2) ಪ್ರೇರಣಾ ಡಿ. ರಾವ್ 3) ರೋಹಿತ್

ಛದ್ಮವೇಷ ಸ್ಪರ್ಧೆ (5 ರಿಂದ 7ನೇ ತರಗತಿ ವರೆಗೆ) : 1) ಶ್ರವಣ್ ಹಿರಿಯಡ್ಕ 2) ಶ್ರಾವ್ಯ ಕಟಪಾಡಿ

ಛದ್ಮವೇಷ ಸ್ಪರ್ಧೆ (8ನೇ ತರಗತಿ ನಂತರ) : ಸಮಾಧಾನಕರ ಬಹುಮಾನ - ಅಶ್ವಿನಿ ಶಾಸ್ತ್ರಿ

## ಕೆ. ಭಾಗೀರಥಿ ಶಾಸ್ತ್ರಿ ಪ್ರತಿಷ್ಠಾನ : ವಿದ್ಯಾರ್ಥಿ ಪುರಸ್ಕಾರ



ದಿ| ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ 85% ಹೆಚ್ಚು ಅಂಕಗಳಿಸಿದ 23 ವಿದ್ಯಾರ್ಥಿಗಳನ್ನು ದಿನಾಂಕ 07-09-2008 ರವಿವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ, ಮಂಗಳೂರು ಇಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಜರಗಿದ ಕಾರ್ಯಕ್ರಮದಂದು ಶ್ರೀ ವೈ. ಎಂ. ಶ್ರೀಧರ ರಾಯರು ವಿದ್ಯಾರ್ಥಿ ಪುರಸ್ಕಾರವನ್ನು ನೀಡಿ ಅಭಿನಂದಿಸಿದರು.

**PRAMOD**
**AUTOMOBILES**
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. : **Ln. K. HARSHA KUMAR**

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ
